# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಹೊಳಲ್ಕೆರೆ.

## ಸಿ.ಸಿ. ನಂ. 1093/2024

ದಿನಾಂಕ 17/07/2026

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಪಾಂಡುರಂಗಪ್ಪ | ಪಿ.ಡಬ್ಲ್ಯು. | 1 |
| ತಂದೆಯ ಹೆಸರು | : | ಜಯಪ್ಪ | ಸಿ.ಡಬ್ಲ್ಯು. | 1 |
| ವಯಸ್ಸು | : | 43 ವರ್ಷ | | |
| ಉದ್ಯೋಗ | : | ಚಾಲಕ | | |
| ವಾಸ ಸ್ಥಳ | : | ಬಂಡೆ ಬೊಮ್ಮೇನಹಳ್ಳಿ | | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ – ಮಾನ್ಯ ಸ.ಸ.ಅ. ರವರಿಂದ**

ನನಗೆ ಆರೋಪಿ ಗೊತ್ತು. ಚಾಸಾ-2 ಮತ್ತು 3 ನಮ್ಮ ಊರಿನವರು.

ಕಳೆದ 2 ವರ್ಷಗಳ ಹಿಂದೆ ನನ್ನ ಹೆಂಡತಿ ನನ್ನ ತಾಯಿಯ ಕಣ್ಣಿನ ಆಪರೇಶನ್ ಆಗಿದ್ದು ನೋಡಿಕೊಂಡು ಬರಲು ಬಂಡೆಬೊಮ್ಮೇನಹಳ್ಳಿಗೆ ಹೋಗಿದ್ದು, ಅಪಘಾತವಾಗಿ ಮೃತಪಟ್ಟಿರುತ್ತಾಳೆ. ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದ ವಿಚಾರಗಳಾವುವು ನನಗೆ ಗೊತ್ತಿಲ್ಲ.

ನನಗೆ ಈಗ ತೋರಿಸಿದ ದೂರಿನಲ್ಲಿ ನನ್ನ ಸಹಿ ಇದೆ. ಸದರಿ ದೂರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-1 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ಕ್ಕೆ ಸುಮಾರು 2 ವರ್ಷಗಳ ಹಿಂದೆ ಪೊಲೀಸರು ನಮ್ಮ ಊರಿಗೆ ಬಂದಾಗ ಸಹಿ ಮಾಡು ಎಂದು ತಿಳಿಸಿದ್ದರಿಂದ ಮಾಡಿರುತ್ತೇನೆ. ನಿಪಿ-1 ರಲ್ಲಿರುವ ಸಂಗತಿಗಳು ನನಗೆ ಗೊತ್ತಿಲ್ಲ. ಅದನ್ನು ಪೊಲೀಸರು ನನಗೆ ಓದಿ ಹೇಳಿಲ್ಲ.

ಈಗ ನನಗೆ ತೋರಿಸಿದ ಸ್ಥಳ ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಸಾಕ್ಷಿಯು ಸ್ಥಳ ಪಂಚನಾಮೆಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ ಮೇರೆಗೆ ಪಂಚನಾಮೆಯನ್ನು ನಿಪಿ-

2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಿಪಿ-2 ಕ್ಕೆ ಸುಮಾರು 2 ವರ್ಷಗಳ ಹಿಂದೆ ಪೊಲೀಸರು ಸಹಿ ಮಾಡು ಎಂದು ತಿಳಿಸಿದ್ದರಿಂದ ನಮ್ಮ ಊರಿನಲ್ಲಿ ಸಹಿ ಮಾಡಿದ್ದು, ನಿಪಿ-2 ರಲ್ಲಿರುವ ಸಂಗತಿಗಳು ನನಗೆ ಗೊತ್ತಿಲ್ಲ. ಅದನ್ನು ಪೊಲೀಸರು ಓದಿ ಹೇಳಿಲ್ಲ. ನಿಪಿ-2 ಕ್ಕೆ ನನ್ನ ಜೊತೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ.

ಈಗ ಸಾಕ್ಷಿಗೆ ಎರಡು ಪೋಟೋಗಳನ್ನು ತೋರಿಸಲಾಗಿದ್ದು, ಸಾಕ್ಷಿ ಅದರಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ್ದು, ಸದರಿ ಪೋಟೋಗಳನ್ನು ಎಲ್ಲಿ ಮತ್ತು ಯಾವಾಗ ತೆಗೆಸಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಪೊಲೀಸರು ನಿಂತು ಪೋಟೋ ತೆಗೆಸಿಕೊಳ್ಳಲು ಹೇಳಿದ್ದರಿಂದ ನಾನು ಪೋಟೋ ತೆಗೆಸಿಕೊಂಡಿರುತ್ತೇನೆ. ಸದರಿ ಪೋಟೋಗಳನ್ನು ಮತ್ತು ಪೋಟೋಗಳಿಗೆ ಸಂಬಂಧಿಸಿದ ಸಿಡಿಯನ್ನು ಅನುಕ್ರಮವಾಗಿ ನಿಪಿ-3 ರಿಂದ 5 ಎಂದು ಗುರುತಿಸಲಾಯಿತು.

ಈ ಪ್ರಕರಣದ ಸಂಬಂಧ ಪೋಲೀಸರು ನನ್ನನ್ನು ವಿಚಾರಿಸಿರುವುದಿಲ್ಲ ಮತ್ತು ನಾನು ಪೋಲೀಸರ ಮುಂದೆ ಯಾವುದೇ ಮರು ಹೇಳಿಕೆಗಳನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು)**

**ಪಾಟಿ ಸವಾಲು – ಮಾನ್ಯ ಸ.ಸ.ಅ. ರವರಿಂದ**

ದಿನಾಂಕ 02/05/2024 ರಂದು ಬೆಳಿಗ್ಗೆ ನನ್ನ ಮೃತ ಹೆಂಡತಿ ನನ್ನ ತಾಯಿ ಜಯಮ್ಮ ಇವರಿಗೆ ಕಣ್ಣಿನ ಆಪರೇಶನ್ ಆಗಿದ್ದು ಅವರನ್ನು ನೋಡಿಕೊಂಡು ಬರಲು ಆರೋಪಿಯ ಜೊತೆಗೆ ದ್ವಿ ಚಕ್ರ ವಾಹನ ನೊಂದಣಿ ಸಂ. ಕೆಎ-16-ಇಇ-1532 ರ ಮೋಟಾರ್ ಸೈಕಲ್ ನ ಹಿಂಬದಿ ಕುಳಿತುಕೊಂಡು ಹೋಗಿದ್ದು, ನಂತರ ಚಾಸಾ-9 ರವರು 11.15 ಗಂಟೆಗೆ ಕರೆ ಮಾಡಿ ಬಂಡೆಬೊಮ್ಮನಹಳ್ಳಿ ಗೇಟ್ ಹತ್ತಿರ ಅಪಘಾತವಾದ ವಿಚಾರವನ್ನು ತಿಳಿಸಿದ್ದು, ತಕ್ಷಣ ನಾವು ಅಪಘಾತದ ಸ್ಥಳಕ್ಕೆ ಹೋಗಿ ನೋಡಿದಾಗ ಆರೋಪಿ ಅಲ್ಲೇ ಇದ್ದು, ಸದರಿ ಅಪಘಾತವು ಆರೋಪಿಯ ತಪ್ಪಿನಿಂದ ಆಗಿರುತ್ತದೆ ಎಂದು ಚಾಸಾ-9 ರವರು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತವು ಆರೋಪಿ ತನ್ನ ದ್ವಿಚಕ್ರ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ನಡೆಸಿಕೊಂಡು ಹೋಗಿದ್ದರಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಈ ಸಂಬಂಧ ನಾನು ನಿಪಿ-1 ರಂತೆ ಆರೋಪಿತನ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತೇನೆ ಎಂದರೆ ನೆನಪಿಲ್ಲ.

ದಿನಾಂಕ 04/05/2024 ರಂದು ಘಟನಾ ಸ್ಥಳದಲ್ಲಿ ಸಂಜೆ 5.30 ರಿಂದ 6.30

ಗಂಟೆಯವರೆಗೆ ನಾನು ತೋರಿಸಿದ ಸ್ಥಳದಲ್ಲಿ ಪೊಲೀಸರು ಸ್ಥಳ ಮಹಜರ್ ಕ್ರಮ ಜರುಗಿಸಿದ್ದರು ಎಂದರೆ ಸರಿಯಲ್ಲ. ಸದರಿ ಪಂಚನಾಮೆ ಕಾಲಕ್ಕೆ ನಿಪಿ-3 ಮತ್ತು 4 ರ ಫೋಟೋಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 14/05/2024 ರಂದು ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ಸದರಿ ದಿನಗಳಂದು ನನಗೆ ಈಗ ಓದಿ ಹೇಳಿದಂತೆ ಪೋಲೀಸರ ಮುಂದೆ ಮರು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಅಲ್ಲಗಳೆದ ಮರುಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು.

ಅಪಘಾತ ಪಡಿಸಿದ ಆರೋಪಿಯು ನನ್ನ ಸಂಬಂಧಿಕನಾಗಿದ್ದು, ಆರೋಪಿತನ ತಪ್ಪಿನಿಂದ ಅಪಘಾತ ಸಂಭವಿಸಿದ್ದರೂ ಸಹ ಆರೋಪಿತನಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1, 2 ಮತ್ತು 6 ರ ವಿಚಾರಗಳೆಲ್ಲವೂ ಗೊತ್ತಿದ್ದರೂ ಸಹ ಆರೋಪಿತನಿಗೆ ಸಹಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು – ಆರೋಪಿ ಪರ ವಕೀಲರಿಂದ – ಇರುವುದಿಲ್ಲ.**

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.**